ಪೊಲೀಸ್ ಇಲಾಖಾ.

ತಾರೀಖು 17ನೇ ಜುಲೈ 1876.

ಇದರಿಂದ ತಿಳಿಸಲ್ಪಡುವದೇನಂದರೆ,—ಶಿವಮಗ್ಗೆ ಬೆಂಕಿಪುರ ರಸ್ತೆಯಲ್ಲಿ ಸ್ರ 1876ನೇ ಇಸವಿ ಮೇ 27ನೇ ಮತ್ತುಂ ರಾತ್ರಿ ಅಂಜೆ ಆಳುಗಳ ಮೇಲೆ ನಡಿಸಿದ ಡಕಾಯಿತಿ ಮೊಕದ್ದಮೆಯಲ್ಲಿ ಸಂಬಂಧಪಟ್ಟ ತಕಸೀರ್ ವಂದರವತ್ತೇಬಗ್ಯೂ ವ ತಕಸೀರ್ ಸ್ಥಾಪನೆಬಗ್ಯೂ ಅನುಕೂಲಿಸುವಂತಾ ಬಾತ್ಮಿಮಾಕೊಡುವ ಯಾವ ಮನುಷ್ಯನಿಗಾಗಲಿ 300ರೂಪಾಯಿಗಳ ಇನಾಂಕೊಡಲ್ಪಡುವದು.

"ಬಮೋಜೀಬ್ ಹುಕುಂ,"

J. D. Gordon,
Inspr. Genl. of Police.

ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ತಾರೀಖು 22ನೇ ಜುಲೈ 1876.

ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆಪ್ಟ್ಯ್ ಕಾಸ್ ಮೇಕರ್‌ಯವರು 1876ನೇ ಮಾರ್ಚಿ 4ನೇ ಮತ್ತುಂ ಮೈಸೂರು ಗೆಜೆಟ್‌ನಲ್ಲಿ ಫಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮಾಹೇ 3ನೇ ಮತ್ತುಂ 382ನೇ ನಂಬರ್ ಚೀಫ್ ಕಮ್ಮಿಷನರವರ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾದಿಂದ 1876ನೇ ಇಸವೀ ಜೂನ್ 2ನೇ ಮತ್ತುಂ ಮಧ್ಯಾನ್ಹಕ್ಕೆ ಪೂರ್ವ ಕೆಲಸಕ್ಕೆ ವಾಪಸ್ ಬಂದರು.

J. P. Grant,
Offg. S. S. Commr., Mysore.

ಪಬ್ಲಿಕ್ ವರಕ್ಸ್ ಇಲಾಖಾ.

ತಾರೀಖು 24ನೇ ಜುಲೈ 1876.

ಚೀಫ್ ಇಂಜಿನಿಯರ್ ಆಫಿಸ್ ಮ್ಯಾನೇಜರ್ ಮೆಸ್ಟರ್ ರೇನಾಲ್ಡಸ್ ಯವರಿಗೆ 1876ನೇ ಜೂನ್ 22ನೇ ಮತ್ತುಂ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ ಪ್ರಿಪ್ಯಾರಟೋರೀ ರಜಾ ಮಾಹೇ ಮಜ್ಕೂರ್ 29ರ ವರಿಗೂ ವಿಸ್ತರಿಸಲ್ಪಟ್ಟಿರುತ್ತೆ.

W. R. Johnson, *Lieut.-Col.*,
Temporary Chief Engr. of Mysore.

ತಾರೀಖು 19ನೇ ಜುಲೈ 1876.

1ನೇ ನಂಬರ್ ಟ್ಯಾಂಕ್ ಡಿವೀಜ್ ಯಗ್ಜಿಕ್ಯೂಟಿವ್ ಇಂಜಿನಿಯರ್ ಆಫಿಸ್ ಡ್ರಾಫಟ್ಸ್‌ಮ್ಯಾನ್ ಮುರಗೇಶ ಮೊದಲ್ಯಾರು ಮಾಹೇ ಮಜ್ಕೂರ್ 17ರಲ್ಲು ಕೆಲಸಕ್ಕೆ ವಾಪಸ್ ಬಂದದ್ದರಿಂದ ಜೂನ್ 24ನೇ ಮತ್ತುಂ 2ನೇ ನಂಬರ್ ಇಸ್ತಿಹಾರಿನಲ್ಲಿ ಅವರಿಗೆ ಕೊಡಲ್ಪಟ್ಟ ಮತ್ತು ಜುಲೈ 3ನೇ ತಾರೀಖಿನ ಲಗಾಯತು ಉಪಯೋಗಿಸಿಕ್ಕೊಂಡ ರಜಾ ಪೈಕೀ ಉಳಿದ ರಜಾ ರದ್ದು ಮಾಡಲ್ಪಟ್ಟಿದೆ.

C. B. Target,
Exe. Engr., No. I Tank Division.